Construction of Dasarahalli Tank in Chickmagalur

702. Sri K. H. RANGANATH (Mudigere) [On behalf of SRI C. M. S. SASTRY (Chickmagalur)].--

Will the Minister of State for Minor Irrigation be pleased to state :—

(*a*) the original estimate of Dasarahalli tank in Chickmagalur ;

(*b*) the total amount spent so far over that work ;

(*c*) the total acreage that gets benefited from this tank ;

(*d*) the nature of perennial or other water source to this tank :

(*e*) whether the Government have any idea of diverting Honnammanahalla water in Chickmagalur to feed this tank ;

(*f*) if so, whether any survey is conducted in this behalf ;

(*g*) whether orders have already been made for this Honnammanahalla water in Chickmagalur to feed this tauk ;

(*h*) the approximate cost of the project ?

Smt. BASAVARAJESWARI (Deputy Minister for Social Welfare) [On behalf of SRI A. J. DODDAMETI (Minister of State for Minor Irrigation)].—

(*a*) Rs. 3·0 lakhs.

(*b*) Rs. 10,59,620 to end of January 1969.

(*c*) 910 Acres,

(*d*) The water source is from an independent catchment area of 5 square miles.

(*e*) Preliminary investigation is proposed.

(*f*) Not yet.

(*g*) Does not arise in view of reply to (*e*) and (*f*) above.

(*h*) Does not arise in view of reply to (*e*) and (*f*) above.

ಶ್ರೀ ಕೆ. ಎಚ್. ರಂಗನಾಥ್.—ಮೂಲ ಅಂದಾಜು ಮೂರು ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ ಮತ್ತು 1969ನೇ ಇಸವಿಯ ಜನವರಿ ಮಾಹೆಯ ಅಂತ್ಯದವರೆಗೆ 10,59,620 ರೂಪಾಯಿ ಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದೀರಿ. ಆದ್ದರಿಂದ ರಿವೈಸ್ಡ್ ಎಸ್ಟಿಮೇಟ್‌ನ ಅಂದಾಜು ಎಷ್ಟು ಎಂದು ಹೇಳುತ್ತೀರಾ ?

†ಶ್ರೀಮತಿ ಬನವರಾಜೇಶ್ವರಿ.—13.5 ಲಕ್ಷ ರೂಪಾಯಿಗಳು.

ಶ್ರೀ ಕೆ. ಎಚ್. ರಂಗನಾಥ್.—(ಈ)ಗೆ ಉತ್ತರವಾಗಿ ಐದು ಚದರಮೈಲಿಗಳ ಪ್ರದೇಶವಿರುವ ಸ್ವಾವಲಂಬಿ ಜಲಾನಯನ ಪ್ರದೇಶವೊಂದು ನೀರೊದಗಿಸುವ ಮೂಲವಾಗಿದೆ ಎಂದು ಹೇಳಿದ್ದೀರಿ. ಈ ಕೆರೆಗೆ ನೀರನ್ನು ಒದಗಿಸಲು ಯಾವುವಾದರು ಅಣೆಕಟ್ಟೆ ಅಥವಾ ಹಳ್ಳವನ್ನು ಆಧಾರವಾಗಿ ಇಟ್ಟುಕೊಂಡಿದ್ದೀರಾ ?

ಶ್ರೀಮತಿ ಬನವರಾಜೇಶ್ವರಿ.—ಈ ಕೆರೆಗೆ ಹೊನ್ನಮ್ಮನ ಹಳ್ಳದ ನೀರನ್ನು ಒದಗಿಸದಿದ್ದರೆ ಆ ಕೆರೆಯನ್ನು ಭರ್ತಿ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಈ ಕೆರೆಗೆ ಪೂರ್ತಿಯಾಗಿ ಯಾವ ಯಾವ ಕಡೆಗಳಿಂದ ಎಷ್ಟೆಷ್ಟು ನೀರನ್ನು ಒದಗಿಸುವುದಕ್ಕೆ ಸರ್ವೆ ಮಾಡಿಸಿದ್ದಾರೆ ?

ಶ್ರೀಮತಿ ಬನಶಂಕರಾಜೇಶ್ವರಿ.—ಹೊನ್ನಮ್ಮನ ಹಳ್ಳ, ದಾನಮಹಳ್ಳಿ ಹಳ್ಳದ ಜೊತೆಗೆ ಹಿರಿಕೊಳ್ಳಹಳ್ಳಿ, ಮಾಡಗಹಳ್ಳಿ ಹಳ್ಳಗಳಿಂದಲೂ ಕೂಡ ನೀರನ್ನು ತಿರುಗಿಸಬೇಕೆಂಬ ಪ್ರಪೋಜಲ್ ಇದೆ. ಈಗ ಇನ್ ವೆಸ್ಟಿಗೇಷನ್ ಸ್ಟೇಜ್‌ನಲ್ಲಿದೆ. ಇನ್‌ವೆಸ್ಟಿಗೇಷನ್ ಆದಮೇಲೆ ಅಂಕಿಅಂಶಗಳನ್ನು ಓದಿಸುವುದಕ್ಕೆ ಸಾಧ್ಯವಾಗಬಹುದು, ಸದ್ಯಕ್ಕೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಹೊನ್ನಮ್ಮನ ಹಳ್ಳದಿಂದ ನೀರನ್ನು ಈ ಕೆರೆಗೆ ತಿರುಗಿಸ ಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ರೆಪ್ರಜೆಂಟೇಷನ್ ಕೊಟ್ಟಿದ್ದೆವು. ಈ ಬಗ್ಗೆ ಮುಖ್ಯ ಮಂತ್ರಿಗಳು ಆರ್ಡರ್ ಮಾಡಿದ್ದಾರೆಂದು ತಿಳಿದುಬಂತು. ಆದ್ದರಿಂದ ಈ ಬಗ್ಗೆ ಸರ್ವೆ ಕೆಲಸ ಮಾಡಲಾಗಿದೆಯೇ ಮತ್ತು ನೀರನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಲಾಗಿದೆಯೇ? ಏಕೆಂದರೆ 13 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ನೀರು ಇಲ್ಲದಿರುವ ಪರಿಸ್ಥಿತಿ ಬಂದರೆ ಕಷ್ಟವಾಗುತ್ತದೆ.

ಶ್ರೀಮತಿ ಬನಶಂಕರಾಜೇಶ್ವರಿ —ಈಗಾಗಲೇ ಪ್ರಪೋಜಲನ್ನು ಇನ್‌ವೆಸ್ಟಿಗೇಷನ್ ನಲುವಾಗಿ ಎಕ್ಸಿಕ್ಯುಟಿವ್ ಇಂಜಿನಿಯರ್ ನಂಬರ್-2, ಪ್ರೇಜರ್ ಇರಿಗೇಷನ್ ಅಂಡ್ ಇನ್‌ವೆಸ್ಟಿಗೇಷನ್ ಡಿವಿಜನ್ ಅವರಿಗೆ ಕಳಿಸಲಾಗಿದೆ. ಅವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ.

ಶ್ರೀ ಎನ್. ಜಿ. ಹಾಲಪ್ಪ.—ಈ ಕೆರೆಯ ಕೆಲಸವನ್ನು ಯಾವ ಕಂಟ್ರಾಕ್ಟರ್‌ಗೆ ವಹಿಸಲಾಗಿದೆ; ಮತ್ತು ಈ ಎಷ್ಟು ಎಕರೆಗೆ ನೀರಾವರಿಯಾಗುತ್ತಿದೆ?

ಶ್ರೀಮತಿ ಬನಶಂಕರಾಜೇಶ್ವರಿ.—ಯಾವ ಕಂಟ್ರಾಕ್ಟರ್ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ಕೆರೆಯಿಂದ 910 ಎಕರೆ ನೀರಾವರಿಯಾಗುತ್ತದೆಂದು ಸರ್ಕಾರದ ಗಮನಕ್ಕೆ ಬಂದಿದೆ.

Sri C. K. RAJAIAH SHETTY.—What are the special circumstances to revise the estimate from 3 lakhs to 13 lakhs?

ಶ್ರೀಮತಿ ಬನಶಂಕರಾಜೇಶ್ವರಿ.—1956-57ರಲ್ಲಿ 3 ಲಕ್ಷ ರೂಪಾಯಿಗಳಿಗೆ ಅಂದಾಜನ್ನು ತಯಾರು ಮಾಡಲಾಗಿತ್ತು. ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಈ ಅಂದಾಜಿನ ಮೊತ್ತ ಹೆಚ್ಚಾಗುತ್ತಾ ಹೋಗಿದೆ.

2-00 P.M.

ಶ್ರೀ ಮಹದೇವ್ ಜಿ. ಬಣಕಾರ್.—ಕೆರೆಯ ಕಂಟ್ರಾಕ್ಟರ್ ಯಾವ ಜಿಲ್ಲೆಯವರು ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ?

ಶ್ರೀಮತಿ ಬನಶಂಕರಾಜೇಶ್ವರಿ.—ಈ ವಿಷಯ ನನ್ನ ಮುಂದಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—1956-57 ರಿಂದ 1969 ನೇ ಇಸವಿಯವರೆಗೆ ಒಂದಲ್ಲ ಒಂದು ರಿವೈಸು ಮಾಡಿರುವ ಅಂದಾಜುಗಳು ಬರುತ್ತಿರುವುದರಿಂದ ಒಂದೊಂದು ಕೆರೆ ನಿರ್ಮಾಣವಾಗ ಬೇಕಾದರೆ ನೂರು ವರ್ಷಗಳೇ ಆಗುತ್ತದಲ್ಲವೇ?

ಶ್ರೀಮತಿ ಬನಶಂಕರಾಜೇಶ್ವರಿ.—100 ವರ್ಷಗಳು ಏನೂ ಆಗುವುದಿಲ್ಲ. ಪರಿಶೀಲನೆ ಮಾಡು ವಾಗ ಕೆಲವು ವೇಳೆ ಇನ್ನೂ ಹೆಚ್ಚು ನೀರಾವರಿಯಾಗುವ ಅನುಕೂಲ ಇದೆ ಎಂದು ಪ್ರಪೋಸಲ್‌ಗಳು ಬಂದುದರಿಂದ ಕೆಲವು ವೇಳೆ ಬದಲಾವಣೆಯಾಗುತ್ತದೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆಯಾಯಿತು. Now Short Notice Question.

Requests to extend Question Hour

ಶ್ರೀ ವಾಟಾಳ್ ನಾಗರಾಜ್.—ನನ್ನ ಪ್ರಶ್ನೆ ಕೇಳುವಾಗಲೇ ಏತಕ್ಕೆ ಹೀಗೆ ಮಾಡುತ್ತೀರಿ? ನಾವು ಪ್ರಶ್ನೆಗಳನ್ನು ಕಳುಹಿಸುವುದರ ಉದ್ದೇಶವಾದರೂ ಏನು? ನನ್ನ ಪ್ರಶ್ನೆ ಬಂದಾಗಲೇ ಹೀಗಾಗುತ್ತಿದೆ. ಹಿಂದೆ ಕೂಡ ಹೀಗೆ ಎರಡು ಪ್ರಶ್ನೆಗಳು ಬಂದವು. ಅವನ್ನೂ ಹಾಗೇ ಮಾಡಿದಿರಿ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು.—ಅದು ಆಗುವುದಿಲ್ಲ.